**ಸಾಕ್ಷಿಯನ್ನು ದಿನಾಂಕಃ 25-09-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ ಶ್ರೀ. ಟಿ.ಹೆಚ್.ಎಮ್.ಎಮ್ ವಾದಿ ಪರ ವಕೀಲರವರಿಂದಃ**

2005 ರಲ್ಲಿ ಡಿಪ್ಟೀನ್ ಮುಸ್ಲಿಂ ಮೈನಾರಿಟಿ ಎಜುಕೇಶನ್ ಅಂಡ್ ವೆಲ್ಫರ್ ಟ್ರಸ್ಟ್ ಆಸ್ತಿತ್ವಕ್ಕೆ ಬಂದಿರುತ್ತದೆ. ಆ ಬಗ್ಗೆ ನಾನು ಯಾವುದೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯ್ಲುಲ. 2005 ನೇ ಸಾಲಿನಲ್ಲಿ ಸದರಿ ಸಂಸ್ಥೆಯ ಅಧ್ಯಕ್ಷರಾಗಿ ಡಿ.ಅಬ್ದುಲ್ ಅಫೀಜ್ ತಂದೆ ಉಮಲ್ ಸಾಹೇಬ್ ಇವರು ಇದ್ದರು. ಸದರಿ ಸಂಸ್ಥೆಯಲ್ಲಿ 11 ಜನ ಸದಸ್ಯರು ಇದ್ದರು. 2005 ನೇ ಸಾಲಿನಲ್ಲಿ ಸಂಸ್ಥೆಯ ಮೀಟಿಂಗ್ ಆದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

2. 2006 ನೇ ಸಾಲಿನಲ್ಲಿ ವಾದಿಯ ಗಂಡನಾದ ಮನ್ಸೂರ ಸಾಬ್ ತಂದೆ ಇಸ್ಮಿಯಾಲ್ ಸಾಬ ದಾವ ಆಸ್ತಿಯನ್ನು ಮಾರಟ ಮಾಡುವುದಾಗಿ ಪ್ರಸ್ತಾಪ ಮಾಡಿದ್ದರು. ದಾವ ಆಸ್ತಿ ಸರ್ವೇ ನಂ.161/2 ಎಂದು ಇದ್ದು ಅದರ ವಿಸ್ತೀರ್ಣ 0.02 ಸೆಂಟ್ಸ ಇರುವುದು. ಅದು ಹರಪನಹಳ್ಳಿಯ 3 ನೇ ವಾರ್ಡ್ ನ ಬಾಣಗೆರೆಯಲ್ಲಿ ಇರುವುದು. ಸದರಿ ಆಸ್ತಿಯು ಹೋಬಳಪುರದ ಇಸ್ಮಾಯಿಲ್ ಸಾಬ್ ಇವರ ಹೆಸರಿನಲ್ಲಿ ಮೂಲತಃ ಇತ್ತು. ಸದರಿ ಇಸ್ಮಾಯಿಲ್ ಸಾಬ್ ವಾದಿಯ ಮಾವ ಎಂದರೆ ಸರಿ. ಅದು ಇಸ್ಮಾಯಿಲ್ ಸಾಬ್ ರವರ ಪಿತ್ರಾರ್ಜಿತ ಆಸ್ತಿ ಇರುವುದು. ನಾನು ಆ ಸಮಯದಲ್ಲಿ ಮೇಲೆ ಹೇಳಿದ ಸಂಸ್ಥೆಯ ಕಾರ್ಯದರ್ಶಿಯಾಗಿದ್ದೆನು. ಆಗ ಸಂಸ್ಥೆಯ ಕಚೇರಿ ಅಕ್ಬರ್ ಸಾಬ್ ರವರ ಬಾಡಿಗೆ ಮನೆಯಲ್ಲಿ ಇತ್ತು.

3. ವಾದಿಯ ಗಂಡ ಮತ್ತು ವಾದಿಯ ಗಂಡನ ತಮ್ಮ ದಾವ ಆಸ್ತಿಯನ್ನು ಮಾರಟ ಮಾಡುವುದಾಗಿ ಪ್ರಸ್ತಾಪ ಮಾಡಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರೂ.1,10,000 ಕ್ಕೆ ಮಾತುಕತೆ ಆಗಿ, ಮುಂಗಡವಾಗಿ ರೂ.10,000

**ಸಾಕ್ಷಿಯ ಸಹಿ** 25.09.2025

ದಿನಾಂಕ 30-06-2006 ರಂದು ನೀಡಿದ್ದೆವು. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಆಸ್ತಿಯು ನನ್ನ ಸ್ವಾಧೀನದಲ್ಲಿ ಇದೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮನ್ಸೂರ್ ಕರಾರು ಪತ್ರಕ್ಕೆ ಎಡಗೈ ಹೆಬ್ಬೆಟ್ಟಿನ ಗುರುತನ್ನು ಹೊತ್ತಿರುವೆನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತಹೀರಾ ಬೀ ರವರು ಸದರಿ ಪತ್ರಕ್ಕೆ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪತ್ರವು ಖರೀದಿ ಪತ್ರವು ಆಗಿರುತ್ತದೆ. ಅದರ ಶಿರೋಮನೆ ಬೇರೆ ಇದ್ದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇನ್ನೂಂದು ಪತ್ರವನ್ನು ವಾದಿಯ ಗಂಡ ಮತ್ತು ಆತನ ತಮ್ಮ ದಿನಾಂಕ 03-07-2007 ರಲ್ಲಿ ಬರೆದು ಕೊಟ್ಟಿರುವರು. ಅದು ಕೂಡ ಖರೀದಿ ಪತ್ರ ಆಗಿರುತ್ತದೆ. ಅದು ಖರೀದಿ ಪತ್ರ ಆಗಿರುವುದಿಲ್ಲ ಅದು ಖರೀದಿ ಪತ್ರ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪತ್ರವನ್ನು ನಾನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಪತ್ರವನ್ನು ಡಂಕಿ ಕಲಂದರ್ ಸಾಬ್ ರವರು ಬರೆದಿರುವರು. ಅವರು ಸುಳ್ಳು ದಾಖಲೆಗಳನ್ನು ಸೃಷ್ಟಿಸಿರುವರು ಎಂದು ಕ್ರಿಮಿನಲ್ ಕೇಸ್ ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ಇನ್ನೂಂದು ಪತ್ರ ದಿನಾಂಕ 24-10-2010 ರಂದು ಬರೆದುಕೊಟ್ಟಿರುವರು. ಅದು ಕೂಡ ಖರೀದಿ ಪತ್ರ ಆಗಿರುತ್ತದೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಗಂಡ ಸೇರಿದಂತೆ ಅವರು 4 ಜನ ಅಣ್ಣ ತಮ್ಮಂದಿರು.

4. ದಿನಾಂಕ 27-11-2004 ರಂದು ವಾದಿಯ ಗಂಡ ಹಾಗೂ ಅವರ ತಮ್ಮಂದಿರು ನೊಂದಯಿತ ಪಾಲು ವಿಭಾಗ ಪತ್ರವನ್ನು ಮಾಡಿಕೊಂಡಿರುವರು ಎಂದರೆ ಸರಿ. ಸದರಿ ಪಾಲು ವಿಭಾಗದಲ್ಲಿ ವಾದಿಯ ಗಂಡನಿಗೆ ದಾವ ಆಸ್ತಿ ಬಂದಿರುತ್ತದೆ ಎಂದರೆ 2 ಸೆಂಟ್ಸ್ ಬಂದಿರುತ್ತದೆ. ಮನ್ಸೂರ್ ಸಾಬ್ ಅಂಗವಿಕಲರು ಎಂದರೆ ಸರಿಯಲ್ಲ. ಅವರು ಯಾವುದೇ ಕೆಲಸ ಮಾಡುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 30-10-2015 ರಂದು ಮನ್ಸೂರ್ ಸಾಬ್ ರವರು ದಾವ

ಆಸ್ತಿಯನ್ನು ತನ್ನ ಹೆಂಡತಿಯ ಹೆಸರಿಗೆ ದಾನ ಪತ್ರದ ಮೂಲ ವರ್ಗಾಯಿಸುವರು ಎಂದರೆ, ಸದರಿ ದಾಖಲೆಯು ಸುಳ್ಳು ದಾಖಲೆಯಾಗಿರುತ್ತದೆ. ಸದರಿ ದಾನ ಪತ್ರದ ಆಧಾರದ ಮೇಲೆ ಮನ್ಸೂರ್ ಸಾಬ್ ಇವರ ಪತ್ನಿಯಾದ ತಾಹೀರ್ ಬೀ ರವರ ಹೆಸರಿಗೆ ಖಾತಾ ಬದಲಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ.

5. ಮನ್ಸೂರ್ ಹಾಗೂ ಅವರ ತಮ್ಮ ದಾದಾಪೀರ್ ಇವರು ಜೊತೆಯಲ್ಲಿ ವಾಸವಿರುವರು ಎಂದರೆ ಸರಿಯಲ್ಲ. ದಾವ ಆಸ್ತಿಯಲ್ಲಿ ಮನ್ಸೂರ್ ಹಾಗೂ ದಾದಾಪೀರ್ ರವರು ಷೆಡ್ ಅನ್ನು ಹಾಕಿಕೊಂಡು ಅದರಲ್ಲಿ ಸಲಕರಣಗಳನ್ನು ಇಡುತ್ತಿರುವರು ಎಂದರೆ ಸರಿಯಲ್ಲ. ಇವತ್ತಿಗೂ ದಾವೆ ಆಸ್ತಿ ವಾದಿ ಸ್ವಾಧೀನ ಅನುಭವದಲ್ಲಿ ಇರುವುದು ಎಂದರೆ ಸರಿಯಲ್ಲ.

6. ಮೇಲೆ ಹೇಳಿದ ಡಿಪ್ಟೀನ್ ಮುಸ್ಲಿಂ ಮೈನಾರಿಟಿ ಎಜುಕೇಶನ್ ಅಂಡ್ ವೆಲ್ಫರ್ ಟ್ರಸ್ಟ್ ಗೆ ದಾವ ಆಸ್ತಿಯನ್ನು ಕೊಡಲಿಲ್ಲ ಎಂಬ ಕಾರಣಕ್ಕೆ ನಾವು ಸುಳ್ಳಾಗಿ ಪತ್ರಗಳನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಇವತ್ತಿಗೂ ತಹೀರ ಬೀ ರವರ ಹೆಸರಿನಲ್ಲಿ ಪಹಣಿ ಪತ್ರಿಕೆ ಇದೆ ಎಂದರೆ ನನಗೆ ಗೊತ್ತಿಲ್ಲ. ನನಗೆ ದಾವ ಆಸ್ತಿಯ ಮೇಲೆ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

**25-09-2025**
**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** 25.09.2025